ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೧೫೯೬ ಗ್ರಾಮಗಳು

ಆ) ೧೯೮೮-೮೯ನೇ ಸಾಲಿನ ಕೊನೆಯ ಹೊತ್ತಿಗೆ ಎಲ್ಲ ಹಳ್ಳಿಗಳನ್ನು ವಿದ್ಯುದ್ದೀಕರಣಗೊಳಿಸಲು ಯೋಚಿಸಲಾಗಿದೆ.

ಅಧ್ಯಕ್ಷರು.—ಪ್ರಶ್ನೋತ್ತರಗಳನ್ನು ಮುಂದಿಸಲಾಯಿತು.

ಹಕ್ಕುಚ್ಯುತಿ ನಿರ್ಣಯ ಮುಂದಿನೆಗೆ ಅನುಮತಿ ಕೋರಿಕೆ

ನಗರಾಭಿವೃದ್ಧಿ ಸಚಿವರು ನೀಡಿದ ತಪ್ಪು ಹೇಳಿಕೆ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ವಿಧಾನಸಭೆಯ ನಿಯಮಾವಳಿಯ ೧೯೩ರ ಪ್ರಕಾರ ನಾನು ನಗರಾಭಿವೃದ್ಧಿ ಸಚಿವರ ಮೇಲೆ ಪ್ರಿವಿಲೇಜ್ ಮೋಷನ್ ತರುವುದಕ್ಕೆ ತಮಗೆ ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು.—ನೀವು ಲಾ ಮಿನಿಸ್ಟರ್ ಮೇಲೆ ಕೊಟ್ಟಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಗರಾಭಿವೃದ್ಧಿ ಸಚಿವರ ಮೇಲೆ ಹಕ್ಕು ಬಾಧ್ಯತಾಚ್ಯುತಿ ಸೂಚನೆಯನ್ನು ನಿಯಮ ೧೯೩ರ ಪ್ರಕಾರ ತಂದಿರುತ್ತೇನೆ.

ಅಧ್ಯಕ್ಷರು.—ಅದನ್ನು ಆಮೇಲೆ ತೆಗೆದುಕೊಳ್ಳುತ್ತೇನೆ ನಿಮಗೆ ಅವಕಾಶ ಕೊಡುತ್ತೇನೆ. ಈಗ ತಾವು ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ನನಗೆ ಅವಕಾಶ ಮಾಡಿಕೊಡಿ. ನಾನು ಇದರ ಬಗ್ಗೆ ಮಾತನಾಡಬೇಕು.

ಅಧ್ಯಕ್ಷರು.—ಆಮೇಲೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಿಯಮ ೧೯೩ರ ಪ್ರಕಾರ ನಾನು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶ ಇದೆ. ಮಾನ್ಯ ಲಕ್ಷ್ಮೀಸಾಗರರವರು ನಿನ್ನೆ ಸಭೆಯಲ್ಲಿ ಕೊಟ್ಟಂತ ಹೇಳಿಕೆ ತಪ್ಪಾಗಿದೆ.

ಅಧ್ಯಕ್ಷರು.—ಅವಕಾಶ ಕೊಡುತ್ತೇನೆ, ತಾವು ಈಗ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಡಿಸ್ಕಷನ್‌ಗೆ ಬೇಕಾದರೆ ನಾಳೆ ಅವಕಾಶ ಕೊಡಿ. ನಿಯಮ ೧೯೩ರ ಪ್ರಕಾರ ನನಗೆ ಮಾತನಾಡುವುದಕ್ಕೆ ಅವಕಾಶ ಇದೆ.

ನನ್ನ ಅರಿಕೆ ತಮಗೆ ಸರಿಯಾಗಿಲ್ಲ ಎಂದು ಅನಿಸಿದರೆ, ತಾವು ಹೇಳಬಹುದು.....ತಮಗೆ ಆ ವಿಷಯದ ಬಗ್ಗೆ ತಿಳಿಸಿ ಹೇಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.....ಒಂದು ನಿಮಿಷದ ಅವಕಾಶ ಮಾಡಿಕೊಡಬೇಕು. ನನ್ನ ಪ್ರಶ್ನೆ ಏನೆಂದರೆ, ಇದರಲ್ಲಿ ಫ್ರೈಮಾಫೇಸಿ ಕೇಸ್ ಇದು ಇದೆಯೋ ಇಲ್ಲವೋ ಎಂದು ತಾವು ಪರಿಶೀಲನೆ ಮಾಡಿ.....

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ತಾವು ಇವೊತ್ತು ಬೆಳಿಗ್ಗೆ ೧೦ ಗಂಟೆಗೆ ಈ ವಿಷಯವನ್ನು ಕೊಟ್ಟಿದ್ದೀರಿ. ಮುಂದೆ ತಮಗೆ ಅವಕಾಶವನ್ನು ಪರಿಶೀಲನೆ ಮಾಡಿ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಿಯಮಾವಳಿಯಲ್ಲಿ ಸದನ ಸೇರುವುದಕ್ಕೆ ಮುಂಚೆ ಸೂಚನೆಯನ್ನು ಕೊಟ್ಟರೆ ಸಾಕು ಎಂದು ಇದೆ. ನಾನು ವಿಷಯದ ಮಹತ್ವವನ್ನು ಈಗ ಹೇಳುತ್ತೇನೆ..... ನಿನ್ನೆಯ ದಿವಸ ಮಾನ್ಯ ನಗರಾಭಿವೃದ್ಧಿ ಸಚಿವರು, ಬೆಂಗಳೂರು ನಗರ ಕಾರ್ಪೊರೇಷನ್‌ರವರು ವಿಧಿಸಿದ ಆಸ್ತಿ ತೆರಿಗೆ ಪರಿಷ್ಕರಣದ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತಾ, ಈ ಸದನವನ್ನು ತಪ್ಪು ದಾರಿಗೆ ಎಳೆದು ಅಗತ್ಯ ಮಾಹಿತಿಗಳನ್ನು ಉದ್ದೇಶಪೂರ್ವಕವಾಗಿ ಹೇಳಿದ್ದು ಆ ಸ್ಟೇಟ್‌ಮೆಂಟ್‌ನಲ್ಲಿ ಕಾಣುತ್ತಾ ಇದೆ. ಅದರಲ್ಲಿ "ಈ ವಿಷಯದಲ್ಲಿ ಬೆಂಗಳೂರು ಮಹಾನಗರಪಾಲಿಕೆಯ ಅಧಿಕಾರಿಗಳು ವಾರ್ಷಿಕ ಮೌಲ್ಯ ಪರಿಷ್ಕರಿಸುವ ಬಗ್ಗೆ ಈ ಪರೆಗೆ ಮಾಡಿದ ಕೆಲಸಕಾರ್ಯಗಳು ಇಂತಿವೆ. ಸಹಾಯಕ ಕಂದಾಯ ಅಧಿಕಾರಿ ವರದಿ ಮೇಲೆ ಮಾಡಿದ ಅಜ್ಞೆಗಳ ಸಂಖ್ಯೆ ೧,೮೬,೯೮೪. ಆಸ್ತಿವಾರ್ಷಿಕ ಮೌಲ್ಯ

ವನ್ನು ಬದಲಾಯಿಸದೇ ಇರುವ ಪ್ರಕರಣಗಳ ಸಂಖ್ಯೆ ೩೮,೨೨೨, ವಿಶೇಷ ಸೂಚನೆಗಳನ್ನು ಕೊಟ್ಟ ಸಂಖ್ಯೆ ೧,೪೮,೧೫೧. ಖ್ಚೀಕರಿಸಿದ ಪುನರ್‌ಪರಿಶೀಲನ ಅರ್ಜಿಗಳ ಸಂಖ್ಯೆ ೨೯,೫೧೦. ಪರಿಷ್ಕರಿಸಿದ ತೆರಿಗೆಯನ್ನು ಪಾವತಿ ಮಾಡಿದ ಪ್ರಕರಣಗಳ ಸಂಖ್ಯೆ ೧೪,೦೧೮. ಎಂದು ಹೇಳಿದ್ದಾರೆ.

ಬೇರೆ ಬೇರೆ ನಗರ ಪಾಲಿಕೆಗಳನ್ನು ಹೋಲಿಕೆ ಮಾಡಿ, ಬೆಂಗಳೂರು ನಗರ ಪಾಲಿಕೆಗೆ ಅಬ್ಜಕ್ಷನ್ ಬಂದಿರುವುದು ೨೯,೫೧೦ ಎಂದು ಹೇಳಿದ್ದಾರೆ. ೧,೮೬,೯೪೪ ಪರಿಷ್ಕೃತ ತೆರಿಗೆದಾರರ ಮೇಲೆ ಏನು ಪರಿಷ್ಕರಣ ಮಾಡಿದ್ದೀರಿ; ಆದರಲ್ಲಿ ಕಾರ್ಪೊರೇಷನ್ ಕಚೇರಿಯಿಂದ ೬೦ರಷ್ಟು ಭಾಗ ಮಾತ್ರ ಸೂಚನೆ ಜನರಿಗೆ ತಲುಪಿದೆ. ಉಳಿದದ್ದು ತಲುಪಿಲ್ಲ. ಸರ್ವ ಆಗಿದೆ ಎಂದು ಲೆಕ್ಕಕ್ಕೆ ತೆಗೆದುಕೊಂಡರೆ ಅವರು ಏನು ಹೇಳಿದ್ದಾರೆ, ಕೇವಲ ೧೫.೫ ರಷ್ಟು ಮಾತ್ರ ಸಂಖ್ಯೆಯ ಅರ್ಜಿಗಳು ಪುನರ್‌ಪರಿಶೀಲನೆಗಾಗಿ ಬಂದಿವೆ ಎಂದು ಹೇಳಿದ್ದಾರೆ. ಅವರು ಈ ಅಂಕಿಅಂಶಗಳಿಗೆ ಯಾವ ರೀತಿಯಾಗಿ ಬಂದರು ? ಎರಡನೆಯದಾಗಿ ಸದನವನ್ನು ತಪ್ಪು ದಾರಿಗೆ ಎಳೆದದ್ದು ಎಲ್ಲಿ ಅಂದರೆ, ''ಪರಿಷ್ಕರಿಸಿದ ತೆರಿಗೆಯನ್ನು ಪಾವತಿ ಮಾಡಿದ ಪ್ರಕರಣಗಳ ಸಂಖ್ಯೆ ೧೪,೦೧೮ ಎಂದು ಹೇಳಿದ್ದಾರೆ. ಈಗ ೧,೮೬,೯೪೪ ಪರಿಷ್ಕೃತ ತೆರಿಗೆದಾರರಲ್ಲಿ, ನೋಟೀಸ್ ೬೦ರಷ್ಟು ಭಾಗದ ಜನಕ್ಕೆ ತಲುಪದಿರುವ ಸಂದರ್ಭದಲ್ಲಿ, ಬೇರೆ ಬೇರೆ ಕಾರ್ಪೊರೇಶನ್‌ಗಳಲ್ಲಿ ಸಾಕಷ್ಟು ತಕರಾರುಗಳು ಈ ಬಗ್ಗೆ ಬಂದಿವೆ.....

ಅಧ್ಯಕ್ಷರು.—ತಾವುಗಳು ಅಂಕಿಅಂಶಗಳನ್ನು ಹೇಳಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅವರು ೧೫.೫ರಷ್ಟು ಮಾತ್ರ ಪರಿಷ್ಕೃತ ಮಾಡಲಿಕ್ಕೆ ಅರ್ಜಿಗಳು ಬಂದಿವೆ ಎಂದು ಹೇಳುವುದು ತಪ್ಪು. ಪರಿಷ್ಕರಿಸಿದ ತೆರಿಗೆಯನ್ನು ಪಾವತಿ ಮಾಡಿದ ಪ್ರಕರಣಗಳ ಸಂಖ್ಯೆ ೧೪,೦೧೮ ಎಂದು ಹೇಳಿದ್ದಾರೆ. ನನ್ನ ಆರೋಪ ಏನೆಂದರೆ, ೧೪,೦೧೮ ಜನರಲ್ಲಿ ಯಾರಿಗೆ ಇನ್ನೂ ನೋಟೀಸ್ ತಲುಪಿಲ್ಲ ಅಂತಪ ವ್ಯಕ್ತಿಗಳು ಹಣವನ್ನು ಕಟ್ಟಿದ್ದಾರೆ ಎಂದಿದೆ. ಇಲ್ಲಿ ಅಂಕಿಅಂಶಗಳು ಹೆಚ್ಚು ಕಡಿಮೆಯಾಗಿವೆ. ಬೆಂಗಳೂರು ನಗರ ಪಾಲಿಕೆಯಲ್ಲಿನ ತೆರಿಗೆಯನ್ನು ಒಪ್ಪಿಕೊಂಡು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಮುಖ್ಯವಾದ ಸಂಗತಿಯನ್ನು ಮಾನೆಮಾಚಿರುವುದು ಏನೆಂದರೆ, ಇಲ್ಲಿ ಯಾವ ರೀತಿಯಲ್ಲಿ ಸದನವನ್ನು ತಪ್ಪುದಾರಿಗೆ ಎಳೆದಿದ್ದಾರೆ ಎಂದರೆ, ಹಿಂದಿನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿನ ಬಂದಿರುವ ಮುಖ್ಯಾಂಶವನ್ನು ಓದುತ್ತೇನೆ.

''Property Tax now takes new Tarn''

''In his letter, Mr. Narayanrao expressed surprise over the statement of the Minister yesterday. ''You are well aware that the whole matter is now before the Chief Minister to take a final decision. Last week he discussed the same with us including you. In that meeting he has expressed his opinion clearly on the subject you are also aware of the same, he said.''

ಅಂದರೆ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಒಂದು ತೀರ್ಮಾನ ತೆಗೆದುಕೊಳ್ಳದೆ ಮಾನ್ಯ ಮಂತ್ರಿಗಳು ಈ ಸದನದಲ್ಲಿ ಹೇಳಿಕೆ ಕೊಟ್ಟಿರುವುದು ಎನ್ನುವುದಾಗಿದೆ. ಅದೂ ಮುಖ್ಯಮಂತ್ರಿಗಳು ದೆಹಲಿಗೆ ಹೋಗಿರುವಾಗ ಇವರು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಅಲ್ಲದೆ ಕೆಲವು ಸಂಗತಿಗಳನ್ನು ಇವರು ಮುಚ್ಚಿಟ್ಟಿದ್ದಾರೆ. ತಮಗೇ ಗೊತ್ತಿರುವ ಹಾಗೆ ಈ ನಗರದ ಜನತೆಯಿಂದ ಮುಖ್ಯಮಂತ್ರಿಗಳು, ನಗರಾಭಿವೃದ್ಧಿ ಮಂತ್ರಿಗಳು, ಕೌನ್ಸಿಲರ್ಸ್ ಎಲ್ಲಾ ಆರಿಸಿ ಬಂದಿರುವುದು. ಇಷ್ಟೆಲ್ಲಾ ಇರುವಾಗ, ಲಕ್ಷಾಂತರ ಜನಕ್ಕೆ ಅನ್ಯಾಯವಾಗಿರುವಾಗ ಇವರು ಕ್ಷಿಣ್ಮಚ್ಚಿಕೊಂಡು ಕುಳಿತಿದ್ದಾರೆ. ಈ ಸಂದರ್ಭದಲ್ಲೇ ಮೇಯೋಹಾಲ್ ಹತ್ತಿರ ಆಮರಣಾಂತ ಉಪವಾಸ ಮಾಡುತ್ತಿರುವ ಬಿಜೆಪಿ ಕೌನ್ಸಿಲರ್‌ಗಳಲ್ಲಿ ಒಬ್ಬರಾದ ಶ್ರೀ ಆಶ್ವತ್ಥ ನಾರಾಯಣ ಎಂಬುವರು ಯೂರಿನ್ ಕಟ್ಟಿಕೊಂಡು ಆಸ್ಪತ್ರೆಗೆ ಸೇರಬೇಕಾದ ಸ್ಥಿತಿ ಒದಗಿದೆ. ಆ ಸ್ಥಳಕ್ಕೆ ಒಬ್ಬ ಡಾಕ್ಟರನ್ನು ಕಳುಹಿಸುವ ಸೌಜನ್ಯ ಜವಾಬ್ದಾರಿ ಇವರಿಗಿಲ್ಲ. ಈ ಬಗ್ಗೆ ಕ್ಯೂ ಹಕ್ಕುಚ್ಯುತಿ ಆಗಿದೆ. ನನ್ನ ಹತ್ತಿರದ ಕಾರ್ಪೊರೇಷನ್ ದಾಖಲೆಗಳ ಪ್ರಕಾರ ೧೦೦ಕ್ಕೆ ನಲವತ್ತರಷ್ಟು ನೋಟೀಸ್‌ಗಳು ಇನ್ನೂ ಡಿಸ್‌ಪ್ಯಾಚೇ ಆಗಿಲ್ಲ. ಅಲ್ಲದೆ ಕೇವಲ ೨೯,೫೧೦ ಜನ ಮಾತ್ರ ಪುನರ್‌ವಿಮರ್ಶೆಗೆ ಅರ್ಜಿ ಕೊಟ್ಟಿದ್ದಾರೆಂದಿದ್ದಾರೆ. ಆದರೆ ೪೦ ಸಾವಿರ ಜನ ಅರ್ಜಿ ಕೊಟ್ಟಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ ನಾನು ನಿನ್ನೆ ಪರಿಷ್ಕರಣದ ಬಗ್ಗೆ ಕೊಟ್ಟ ಹೇಳಿಕೆಯಲ್ಲಿ ತಪ್ಪು ಮಾಹಿತಿ ಇದೆ, ಅದನ್ನು ದುರುದ್ದೇಶದಿಂದ ಮಾಡಿದ್ದೇನೆಂದು ಹಾರಿಕೆಯ ಆರೋಪವನ್ನು ಸನ್ಮಾನ್ಯ ಸದಸ್ಯರು ನನ್ನ ಮೇಲೆ ಮಾಡಿದ್ದಾರೆ. ನಾನು ಒಬ್ಬ ಮಂತ್ರಿ. ಅಫಿಷಿಯಲ್ಲಾಗಿ ಅಧಿಕಾರಿಗಳಿಂದ ಸ್ಟಾಟಿಸ್ಟಿಕಲ್ ಇನ್‌ಫರ್ಮೇಶನ್ ತರಿಸಿಕೊಳ್ಳುವ ಅಧಿಕಾರ ನನಗಿದೆ. ಆ ಸ್ಟಾಟಿಸ್ಟಿಕ್ಸ್ ಮೇಲೆ ಅನೇಕ ಸಲ ಈ ಸಭೆಗೆ ನಾನು ಉತ್ತರ ಹೇಳಬೇಕಾಗುತ್ತದೆ. ನಾನು ಕೇಳುತ್ತೇನೆ. ಸನ್ಮಾನ್ಯ ಸದಸ್ಯರು ಅವರು ನಿಜವೆಂದು ಹೇಳುವ ಅಂಕಿಅಂಶಗಳನ್ನು ಹೇಗೆ ಯಾರಿಂದ ಎಲ್ಲಿಂದ ಪಡೆದರು ? ಅವರಿಗೆ ಅವರದೇ ಆದ ಮೆಷಿನರಿ ಇದೆಯೇ ? ನಾನು ಹೇಳುವುದಿಲ್ಲ ಸುಳ್ಳು ಅವರು ಹೇಳುವುದು ಮಾತ್ರ ನಿಜ ಎಂದು ಅವರು ಹೇಗೆ ಹೇಳಬಲ್ಲರು ಎಂದು ನಾನು ಕೇಳಿದರೆ ಅವರು ಏನು ಉತ್ತರ ಕೊಡಬಲ್ಲರು ? ಆದ್ದರಿಂದ ಸನ್ಮಾನ್ಯ ಸದಸ್ಯರು ಹೇಳುತ್ತಿರುವುದರಲ್ಲಿ ಏನೂ ಹುರುಳಿಲ್ಲ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಸ್ವಾಮಿ, ನಾನು ಉದ್ದೇಶಪೂರ್ವಕವಾಗಿ ಯಾವ ವಿಚಾರವನ್ನೂ ಸಭೆಯ ಮುಂದಿಟ್ಟಿಲ್ಲ. ಯಾರನ್ನೂ ಮಿಸ್‌ಲೀಡ್ ಮಾಡುವುದಕ್ಕೆ ಪ್ರಯತ್ನಿಸಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಅದೇನೆಂದರೆ ಶಕ್ಧರ್ ಅಂಡ್ ಕೌಲ್ ಅವರ ವಿಶ್ಲೇಷಣೆ ಪ್ರಕಾರ

"Incorrect statement made by a Minister cannot make any basis for a breach of privilege. It is not a lie, if it can be substantiated, that would certainly bring the offence within the meaning of a breach of privilege. Other lapses and other mistakes do not come under this category because every day we find Ministers made their statements in which they make mistakes which they correct afterwards."

ಆದ್ದರಿಂದ ಅವರು ದುರುದ್ದೇಶಪೂರ್ವಕವಾಗಿ ನನ್ನ ಮೇಲೆ ಕತ್ತಿಗುರಾಣಿ ಹಿಡಿದುಕೊಂಡು ಹೊರಟಿದ್ದಾರೆ. ನಾನು ಏನೇ ಹೇಳಿದ್ದರೂ ಅದು ಸಾರ್ವಜನಿಕ ಹಿತದೃಷ್ಟಿಯಿಂದ ಹೇಳಿದ್ದೇ ವಿನಹ ಮಿಸ್‌ಲೀಡ್ ಮಾಡುವುದಕ್ಕಲ್ಲ. ಅವರು ಮಿಸ್‌ಲೀಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ತಪ್ಪು ಅವಕಾಶ ಮಾಡಿಕೊಡಬಾರದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಸ್ ಯಡಿಯೂರಪ್ಪ.—ಅವರು ಕೇಳಿದ್ದಕ್ಕೆ ಉತ್ತರ ಕೊಡುತ್ತೇನೆ ಅವರು ಒಂದು ಮಾತನ್ನು ಏನು ಹೇಳಿದರು.....

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರು ಏನು ಹೇಳಿದ್ದಾರೆ ಅದಕ್ಕೆ ನಾನು ಉತ್ತರವನ್ನು ಕೊಡಬೇಕಾಗುತ್ತದೆ. ನಿಮಗೆ ಯಾವ ಆಧಾರದ ಮೇಲೆ ಈ ಅಂಕಿ ಅಂಶ ಬಂತು ಎಂದು ಕೇಳಿದ್ದಾರೆ. ನಾನು ಒಬ್ಬ ಸರಕಾರೀ ಮಂತ್ರಿಯಾಗಿ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿಯನ್ನು ತರಿಸಿಕೊಂಡು ಹೇಳಿದ್ದೇನೆ, ನಿಮಗೆ ಯಾವ ಆಧಾರದಿಂದ ಅಂಕಿ ಅಂಶ ದೊರಕಿದೆ ಎಂದು ಹೇಳಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳೇ ಈ ಅಂಕಿ ಅಂಶಗಳನ್ನು ಹೇಳಿದ್ದಾರೆ. ಈ ಸದನದಲ್ಲಿ ಯಾವುದೇ ಶಾಸಕರು.....

ಅಧ್ಯಕ್ಷರು.—ತಾವುದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—೧೯೭೬ರಲ್ಲಿ ಜನಕ್ಕೆ ಕೊನೆಯ ಪಕ್ಷ ನೋಟೀಸ್ ಜಾರಿಯಾಗಿದೆ ಎನ್ನುವಂತಹ ಮಾತನ್ನು ಒಬ್ಬ ಸಚಿವರಾಗಿ ಹೇಳುವುದಕ್ಕೆ ತಾವು ಸಿದ್ಧರಿದ್ದೀರಾ ? ಮಾನ್ಯ ಮುಖ್ಯ ಮಂತ್ರಿಗಳು ಚರ್ಚೆ ಮಾಡಿ ಒಂದು ಅಭಿಪ್ರಾಯಕ್ಕೆ ಬಂದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸದೆ, ತಡೆಹಿಡಿಯದೆ ಈ ರೀತಿ ಸದನವನ್ನು ತಪ್ಪು ದಾರಿಗೆ ಎಳೆಯುವಂತಹ ಅಗತ್ಯವಾದರೂ

ಏನಿತ್ತು ? ೧೫.೫ ಪರ್ಸೆಂಟ್ ಮಾತ್ರ ಆಬ್ಜೆಕ್ಷನ್ ಮಾಡಿದ್ದಾರೆಂದು ತಿಳಿಸಿದ್ದೀರಿ ಇಡೀ ರಾಜ್ಯದ ಜನತೆಗೆ ಒಳ್ಳೆಯ ಕೆಲಸ ಮಾಡುತ್ತೇವೆಂದು ಇವರು ಹೇಳಿದ್ದಾರೆ. ಇದು ಸದನವನ್ನು ತಪ್ಪು ದಾರಿಗೆ ಎಳೆಯುವಂಥಾದ್ದಲ್ಲವೇ ? ನೀವು ಹೇಳುತ್ತಿರುವ ಅಂಕಿ ಅಂಶ ಯಾವ ಆಧಾರದಿಂದ ಬಂದಿದೆ ಎಂದು ಮಾನ್ಯ ಮಂತ್ರಿಗಳು ಕೇಳಿದರು, ಯಾವ ಅಧಿಕಾರಿಗಳು ನಿಮಗೆ ಮಿಸ್‌ಲೀಡ್ ಮಾಡಿದ್ದಾರೋ ಅದೇ ಅಧಿಕಾರಿಗಳು ನನ್ನ ಪತ್ರಿಕ ಸರಿಯಾದಂತಹ ಅಂಕಿ ಅಂಶಗಳನ್ನ ಕೊಟ್ಟಿದ್ದಾರೆ. ದಾಖಲೆಗಳನ್ನು ತಮ್ಮ ಮೂಲಕ ಕೊಡುತ್ತೇನೆ. ನಾನು ಪ್ರೂವ್ ಮಾಡದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ನೀವು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೀರಾ ?

ಪ್ರೊ|| ಎ. ಲಕ್ಷ್ಮೀಸಾಗರ್.—ಇಲ್ಲಿ ರಾಜೀನಾಮೆ ಪ್ರಶ್ನೆ ಬರುವುದಿಲ್ಲ ಅವರು ಕೊಟ್ಟು ಕೊಂಡೂ ಹೋಗಲೀ. ಮಿಸ್ ಲೀಡ್ ಮಾಡತಕ್ಕಂತಹ ಯಾವುದೇ ಇನ್‌ಫರ್ಮೇಷನ್ ಅನ್ನು ನಾನು ಕೊಟ್ಟಿಲ್ಲ. ರಾಜಕೀಯ ದುರುದ್ದೇಶದಿಂದ ಈ ರೀತಿ ಮಾಡುತ್ತಿದ್ದಾರೆ. ಸಾರ್ವಜನಿಕ ಹಿತಾಸಕ್ತಿಯಿಂದ ಅವರು ಮಾಡುತ್ತಿಲ್ಲ. ತೆರಿಗೆ ಪರಿಷ್ಕರಣದಲ್ಲಿ ಹೆಚ್ಚೂ ಕಡಿಮೆಯಾಗಿದೆಯೆಂದು ಅವರ ಪಕ್ಷದವರು ಆಮರಣಾಂತರ ಉಪವಾಸ ಮಾಡುತ್ತಿದ್ದಾರೆ. ಅಹಮದಾಬಾದ್ ಕಾರ್ಪೊರೇಷನ್‌ನಲ್ಲಿ ಅವರು ಬಹುಮತದಿಂದ ಆರಿಸಿ ಬಂದಿದ್ದಾರೆ. ತೆರಿಗೆ ಪರಿಷ್ಕರಣವನ್ನು ರಾಜಕೀಯಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಇದು ಸತ್ಯಾಗ್ರಹ ಅಲ್ಲ ದುರಾಚಾರ.

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

(ಶ್ರೀ ಬಿ. ಎಸ್. ಯಡಿಯೂರಪ್ಪನವರು ಸದನದ ಮಧ್ಯದಲ್ಲಿರುವ ವೆಲ್‌ನಲ್ಲಿ ಬಂದು ಧರಣಿ ಕುಳಿತರು)

MR. SPEAKER.—Whatever you have stated is expunged. Whatever you speak will not go in to the records.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ,.....

(ಗೊಂದಲ)

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ಅದು ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಕೊಟ್ಟಂಥಾದ್ದು ಪ್ರಿವಿಲೇಜ್ ಮೋಷನ್. ಅವರು ಹೇಳಬೇಕಾದುದನ್ನು ಹೇಳಿದ್ದಾರೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ ಈಗ ಅದು ಕ್ಲೋಸ್ ಆಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ಯಾರಿಗೂ ಅನ್ಯಾಯವಾಗಿಲ್ಲ ಎಂಬುದು ನಮ್ಮ ಅಭಿಪ್ರಾಯ. ನಿಮ್ಮ ಅಭಿಪ್ರಾಯದಲ್ಲಿ ಅನ್ಯಾಯವಾಗಿದೆ ಎಂದು ನಿಮಗೆ ಇನ್ನೂ ಮಾಹಿತಿಗಳು ಬೇಕಾದಲ್ಲಿ ನೋಟೀಸ್ ಕೊಡಿ. ದಯವಿಟ್ಟು ಮಾನ್ಯ ಸದಸ್ಯರು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ ಇನ್ನೂ ತಮಗೆ ಮಾಹಿತಿ ಬೇಕಾದರೆ ನೋಟೀಸ್ ಕೊಡಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸರ್ಕಾರದಿಂದ ಸರಿಯಾದ ಉತ್ತರ ಬರುತ್ತಿಲ್ಲ. ಯಾವ ರೀತಿಯಲ್ಲಿ ಇಪ್ಪತ್ತು ಜನತಾ ಸರ್ಕಾರ ಆಡಳಿತ ಮಾಡುತ್ತಿದೆ ಎಂದು ಜನತೆಗೆ ಗೊತ್ತಾಗಬೇಕು.

ಅಧ್ಯಕ್ಷರು.—ಈಗ ನೀವು ಏನು ಮಾತನಾಡಿದರೂ ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜ್ಯದಲ್ಲಿ ಜನತೆಗೆ ಗೊತ್ತಿದೆ, ಜನತಾ ಪಕ್ಷ ಯಾವ ರೀತಿ ಕೆಲಸ ಮಾಡುತ್ತಿದೆ, ಬಿ. ಜೆ. ಪಿ. ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದು ಜನತೆಗೆ ಗೊತ್ತಿದೆ.....

(ಗೊಂದಲ)

ತಮ್ಮನ್ನು ಕೇಳಿಕೊಳ್ಳುತ್ತೇನೆ. ನಿಮ್ಮ ಜಾಗಕ್ಕೆ ವಾಪಸ್ಸು ಹೋಗಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ನನಗೆ ನ್ಯಾಯ ಬೇಕು.....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಕೇಳುತ್ತಿರುವುದು ಸರಳವಾದ ಪ್ರಶ್ನೆ. ೧,೮೬,೯೪೪ ಜನರಿಗೆ ಸೊಟೀಸ್ ಸರ್ವ್ ಆಗಿದಯೇ ? ಇಲ್ಲವೇ ಇಷ್ಟನ್ನೇ ಅವರು ಕೇಳುತ್ತಿರುವುದು. ಆದಕ್ಕೆ ನಾನು ಹೇಳುವುದಿಲ್ಲ. ಬಿ. ಜೆ. ಪಿ. ಅಲ್ಲಿ ಆಗಿದೆ, ಹೀಗಿದೆ, ಅಹಮದಾಬಾದ್‌ನಲ್ಲಿ ಹಾಗೆ. ಹೀಗೆ ಎಂದು ರಾಜಕೀಯ ಬೆರೆಸುತ್ತಿರುವವರು ಅವರು ಸಿಂಪಲ್ ಕ್ವೆಶ್ಚನ್‌ಗೆ ಉತ್ತರ ಮಾಡಿಬಿಟ್ಟರೆ ಮುಗಿದು ಹೋಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ಎತ್ತಿರತಕ್ಕಂಥ ಪ್ರಶ್ನೆ ಬ್ರೀಚ್ ಆಫ್ ಪ್ರಿವಿಲೇಜ್. ತಪ್ಪು ಮಾಹಿತಿ ಕೊಟ್ಟಿದ್ದೇನೆಂದು ಈ ಕಾರಣಕ್ಕೋಸ್ಕರ ಹಕ್ಕು ಬಾಧ್ಯತೆಗಳಿಗೆ ಚ್ಯುತಿಯಾಗಿದೆ ಕ್ಷಮಾ ಪಣೆದು ಕೊಳ್ಳ ಬೇಕೆಂದು ಅವರು ಹೇಳುತ್ತಿದ್ದಾರೆ. ಈಗ ಕೇಳುತ್ತಿರುವುದು ಏನು, ಆದನ್ನು ಮಾಹಿತಿ ಕೊಟ್ಟಿರುವುದು ನಿಜ. ಇದರಲ್ಲಿ ದುರುದ್ದೇಶ ಎಲ್ಲಿದೆ ? ನನ್ನ ಹೇಳಿಕೆ ಇವತ್ತಿಗೂ ಸರಿಯಾಗಿದೆ ಎಂದು ಹೇಳುತ್ತಿದ್ದೇನೆ. Committing a mistake in a statement is not breach of privilege. ಇದನ್ನು ತಾವು ಯೋಚನೆ ಮಾಡಿ.

(ಗೊಂದಲ)

ಅಧ್ಯಕ್ಷರು.—ತಾವು ಏನು ಮಾತನಾಡಿದರೂ ರೆಕಾರ್ಡ್ ಆಗುವುದಿಲ್ಲ. ನೀವು ಈಗ ಕೇಳುತ್ತಿರುವುದು ಅದರ ವ್ಯಾಪ್ತಿಯಲ್ಲಿ ಬರುವುದಿಲ್ಲ.....

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ ನಿಮ್ಮ ಜಾಗದಲ್ಲಿ ಕುಳಿತುಕೊಂಡು ಬೇಕಾದರೆ ಮಾತನಾಡಿ. ಈಗ ಇಲ್ಲಿ ಮಾತಾಡಿದರೆ ಅದು ರೆಕಾರ್ಡ್ ಆಗುವುದಿಲ್ಲ. ಪ್ರಿವಿಲೇಜ್ ಮೋಷನ್ ಕೇಳಿರುವ ಬಗ್ಗೆ ನಾನು ರೂಲಿಂಗ್ ಕೊಟ್ಟಿದ್ದೇನೆ. ನೀವು ಹೋಗಿ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ಇನ್ನೊಂದು ಸಾರಿ ರಿಕ್ವೆಸ್ಟ್ ಮಾಡಿ ಹೇಳುತ್ತೇನೆ. ನಿಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಜನತೆಗೆ ನಾವು ಈ ರೀತಿ ಮಾಡಿದರೆ ನಮ್ಮ ಕರ್ತವ್ಯ ಮಾಡಿದ ಹಾಗೆ ಆಗುವುದಿಲ್ಲ.....

(ಗೊಂದಲ)

MR. SPEAKER.—I have to take action against you. ದಯವಿಟ್ಟು ನಿಮ್ಮ ಜಾಗಕ್ಕೆ ನೀವು ಹೋಗಿ. ಬೇಕಾದರೆ ಷಾರ್ಟ್‌ನೋಟೀಸ್ ಕ್ವೆಶ್ಚನ್ ಕಳುಹಿಸಿ.

ಶ್ರೀ ಪಂಪಾಪತಿ.—ಸ್ವಾಮಿ ಯಡಿಯೂರಪ್ಪನವರೇ, ಬನ್ನಿ ಎದ್ದು ಬನ್ನಿ.

ಶ್ರೀ ಆರ್. ವೆಂಕಟರಾಮಯ್ಯ.—ಸಾಕು ಬನ್ನಿ ಸ್ವಾಮಿ. ಪ್ರೊಟೆಸ್ಟ್ ಸಾಕು.

ಶ್ರೀ ಬಿ. ಎ. ಉಮರಬ್ಬ.—ಒಳ್ಳೆಯ ರೀತಿಯಲ್ಲಿ ಮಕ್ಕಳನ್ನು ಆಡಿಸಿದ ಹಾಗೆ ಆಯಿತು.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ ಯಡಿಯೂರಪ್ಪನವರೇ, ವಿರೋಧ ಪಕ್ಷದ ನಾಯಕರು ಕರೆಯುತ್ತಿದ್ದೇವೆ ಬನ್ನಿ.

ಅಧ್ಯಕ್ಷರು.—ಶ್ರೀಮಾನ್ ಬಿ.ಎಸ್. ಯಡಿಯೂರಪ್ಪನವರೇ, ವಿರೋಧ ಪಕ್ಷದ ನಾಯಕರು, ಸಿ.ಪಿ.ಐ. ನಾಯಕರು ಮತ್ತು ಕಮ್ಯುನಿಸ್ಟ್‌ನವರು ನಿಮ್ಮ ಸೀಟಿಗೆ ಬಂದು ಕುಳಿತುಕೊಳ್ಳಿ ಎಂದು ಹೇಳುತ್ತಿದ್ದಾರೆ. ದಯವಿಟ್ಟು ನಿಮ್ಮ ಜಾಗಕ್ಕೆ ಹೋಗಿರಿ.

ಶ್ರೀ ಜೆ.ಹೆಚ್. ಪಟೇಲ್.—ಶ್ರೀಮಾನ್ ಬಿ.ಎಸ್. ಯಡಿಯೂರಪ್ಪನವರು ಈ ಬಗ್ಗೆ ಸೂಕ್ಷ್ಮವಾಗಿ ಹೇಳಿದ್ದಾರೆ. ನಮ್ಮನ್ನು ಏತಕ್ಕೆ ಹಾಗೆ ಮಾಡಿದ್ದಾರೆ ಎಂದು ಕೇಳುತ್ತಿದ್ದಾರೆ. ಅವರು ಈ ರೀತಿ ಮಾತನಾಡುವುದು ಅದಕ್ಕೆ ಇನ್ನೊಬ್ಬರು ಏನನ್ನೊಂದು ರೀತಿ ಮಾತನಾಡುವುದು ಚೆನ್ನಾಗಿಲ್ಲ. ಅವರು ನಗುತ್ತಾರೆ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್.—ಅವರು ತಮ್ಮ ಪ್ರಶ್ನೆಗೆ ಉತ್ತರ ಹೇಳುತ್ತಾರೆ. ಈಗಲೇ ಅದನ್ನು ಇನ್ಸಿಸ್ಟ್ ಮಾಡುವುದು ಬೇಡ. ಮಾನ್ಯ ಸಚಿವರು ನಾಳೆ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಇದರ ಗಂಭೀರತೆಯನ್ನು ಹಾಳು ಮಾಡಬಾರದು. ನಾಳೆ ಅದಕ್ಕೆ ಅವರು ಉತ್ತರವನ್ನು ಓದಿಸುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನೋಟೀಸ್ ಸರ್ವೆ ಆಗಿದೆಯೇ ಇಲ್ಲವೇ ಅಷ್ಟು ಹೇಳಿದರೆ ಸಾಕು.

ಅಧ್ಯಕ್ಷರು.—ತಾವು ನಾಳೆ ದಿವಸ ಷಾರ್ಟ್ ನೋಟೀಸ್ ಕೊಶ್ಚನ್ ಕಳುಹಿಸಿಕೊಡಿ, ಆದಕ್ಕೆ ಉತ್ತರವನ್ನು ಓದಿಸಿಕೊಡುತ್ತಾರೆ. ಈಗಾಗಲೇ ಈ ಬಗ್ಗೆ ರೂಲಿಂಗ್ ಕೊಟ್ಟಿದ್ದಾಗಿದೆ. ಈಗ ನೀವು ದಯವಿಟ್ಟು ನಿಮ್ಮ ಜಾಗಕ್ಕೆ ಹೋಗಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ಅವರಿಗೆ ನೋಟೀಸ್ ತಲುಪಿದೆಯೇ ಇಲ್ಲವೇ ಅವರು ಅಷ್ಟಕ್ಕೆ ಉತ್ತರ ಕೊಟ್ಟರೆ ಸಾಕು. ನನ್ನ ಪ್ರಶ್ನೆ ಏನು ಎಂದರೆ ಒಂದು ಲಕ್ಷ ೮೬ ಸಾವಿರ ೯೮೪ ಜನರದ್ದು ಏನು ಪರಿಷ್ಕರಣೆ ನಡೆದಿದೆ. ಆ ಜನರಿಗೆ ನೋಟೀಸ್ ಸರ್ವೆ ಆಗಿದೆಯೇ ಇಲ್ಲವೇ ಅದನ್ನು ಅವರು ಹೇಳುತ್ತಾ ಇಲ್ಲಪಲ್ಲ!

ಸ್ವಾಮಿ, ನಾನು ಹೇಳುತ್ತಾ ಇರುವ ಮಾತು ಸತ್ಯವಾದುದರಿಂದ ಈಗ ಲೈಟ್ ಹೋಗಿ ಮತ್ತು ಲೈಟ್ ಬಂತು.

ಅಧ್ಯಕ್ಷರು.—ಈಗ ನಾನು ಇದರ ಬಗ್ಗೆ ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಇನ್ನೂ ತಾವು ಮಾತನಾಡುವುದಕ್ಕೆ ಹೋದರೆ I will not allow you ದಯವಿಟ್ಟು ನಿಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ.

ಶ್ರೀ ಜೆ.ಹೆಚ್. ಪಟೇಲ್.—ಇನ್ನು ಮೇಲೆ ಕೆ.ಇ.ಬಿ.ನಲ್ಲಿ ಏನಾದರೂ ತೊಂದರೆಯಾದರೆ ನಾನು ಅವರನ್ನೇ ಉಪಯೋಗಿಸಿಕೊಳ್ಳುತ್ತೇನೆ.

(ಶ್ರೀ ಬಿ.ಎಸ್. ಯಡಿಯೂರಪ್ಪನವರು ತಮ್ಮ ಜಾಗಕ್ಕೆ ಹೋಗಿ ಕುಳಿತುಕೊಂಡರು)

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರ ಹೇಳಿದ ಮಾತಿಗೆ ಗೌರವ ಕೊಟ್ಟು ಹಾಗೂ ತಮ್ಮ ರೂಲಿಂಗ್‌ಗೆ ತಲೆಬಾಗಿ ಕುಳಿತುಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದೇನೆಂದರೆ ಈಗ ಲಕ್ಷಾಂತರ ಜನ ಸಾಯುತ್ತಿದ್ದಾರೆ, ಈಗ ಅಲ್ಲಿ ೪ ಜನ ಕಾರ್ಪೊರೇಟರ್ ಉಪವಾಸ ಸತ್ಯಾಗ್ರಹ ಏನು ಮಾಡುತ್ತಿದ್ದಾರೆ ಅವರು ಸಾಯುವ ಸ್ಥಿತಿಗೆ ಬಂದಿದ್ದಾರೆ. ನಾನೂ ಕೂಡ ಅವರ ಜೊತೆಗೆ ಉಪವಾಸ ಸತ್ಯಾಗ್ರಹ ಮಾಡುವುದಕ್ಕೆ ಅವರ ಜಾಗಕ್ಕೆ ಹೋಗಿ ಕುಳಿತುಕೊಳ್ಳುತ್ತೇನೆ.....

ಅಧ್ಯಕ್ಷರು.—ಅದನ್ನೆಲ್ಲಾ ರಿಕಾರ್ಡ್ ಮಾಡುವುದು ಬೇಡ.

(ಈವಾಗ ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಭೆಯಿಂದ ನಿರ್ಗಮಿಸಿದರು)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ನಾನು ಒಂದು ಪ್ರಿವಿಲೇಜ್ ಮೋಷನ್ ಅನ್ನು ಕಳುಹಿಸಿಕೊಟ್ಟಿದ್ದೇನೆ. ೪-೨-೧೯೮೭ರಲ್ಲಿ ಕಳುಹಿಸಿದ್ದೇನೆ.

ಅಧ್ಯಕ್ಷರು.—ನಿಮ್ಮ ಪ್ರಿವಿಲೇಜ್ ಮೋಷನ್ ಬಂದಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ೪-೨-೧೯೮೭ರಂದು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಸ್ವಾಮಿ, ನಾನೂ ಸಹ ಕೊಟ್ಟಿದ್ದೇನೆ.

ಅಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಆರ್. ವೆಂಕಟರಾಮಯ್ಯ.—ಆಗಿದ್ದರೆ ಸರಿ.